# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **121**

ಸದಸ್ಯರ ಹೆಸರು : ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 11-08-2025

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

***

| | ಪ್ರಶ್ನೆ | ಉತ್ತರ |
|---|---|---|
| ಅ) | ರೈತರ ಮನೆಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸುವ ಬಗ್ಗೆ ಸರ್ಕಾರದ ನಿಲುವೇನು; ಇದನ್ನು ಪ್ರಿಪೇಡ್ ಮಾಡುವ ಉದ್ದೇಶ ಇದೆಯೇ; | ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶಗಳನ್ವಯ ಕೃಷಿ ಪಂಪ್ ಸೆಟ್ ಸ್ಥಾವರಗಳನ್ನು ಹೊರತುಪಡಿಸಿ ಎಲ್ಲಾ ಹೊಸ ಸಂಪರ್ಕಗಳಿಗೆ (ತಾತ್ಕಾಲಿಕ ವಿದ್ಯುತ್ ಸ್ಥಾವರಗಳೂ ಸೇರಿದಂತೆ) ಸ್ಮಾರ್ಟ್ ಮೀಟರ್ ಗಳನ್ನು ಅಳವಡಿಸಲು ಸೂಚಿಸಲಾಗಿರುತ್ತದೆ.<br><br>ಮುಂದುವರೆದು, ಪ್ರೀ-ಪೇಯ್ಡ್ ಅಥವಾ ಪೋಸ್ಟ್-ಪೇಯ್ಡ್ ಬಿಲ್ಲಿಂಗ್ ಮೋಡ್ ಅನ್ನು ಆಯ್ಕೆ ಮಾಡುವುದು ಗ್ರಾಹಕರ ಇಚ್ಛೆಯಾಗಿರುತ್ತದೆ. ಆದರೆ, ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಗ್ರಾಹಕರಿಗೆ ಪ್ರೀ-ಪೇಯ್ಡ್ ಸ್ಮಾರ್ಟ್ ಮೀಟರ್ ಕಡ್ಡಾಯವಾಗಿರುತ್ತದೆ. |
| ಆ) | ಅತಿ ಕಡಿಮೆ ವಿದ್ಯುತ್ ಬಳಕೆ ಮಾಡುವ ರೈತರ ಮನೆಗಳಿಗೆ ಸ್ಮಾರ್ಟ್ ಮೀಟರ್ ಅಳವಡಿಸುವ ಅವಶ್ಯಕತೆ ಇದೆಯೇ; | ಮೇಲಿನ ನಿರ್ದೇಶನದಂತೆ ಕೃಷಿ ಪಂಪ್ ಸೆಟ್ ಸ್ಥಾವರಗಳನ್ನು ಹೊರತುಪಡಿಸಿ ಎಲ್ಲಾ ಹೊಸ ಸಂಪರ್ಕಗಳಿಗೆ ಸ್ಮಾರ್ಟ್ ಮೀಟರ್ ಗಳನ್ನು ಅಳವಡಿಸ ಬೇಕಾಗಿರುತ್ತದೆ |
| ಇ) | ಮೀಟರ್ ಅಳವಡಿಕೆಯ ವೆಚ್ಚವನ್ನು ಯಾರು ಭರಿಸುತ್ತಾರೆ; ಇಲಾಖೆಯಿಂದ ಎಷ್ಟು ವೆಚ್ಚ ಮಾಡಬೇಕಾಗುತ್ತದೆ? (ಸಂಪೂರ್ಣ ವಿವರ ಒದಗಿಸುವುದು) | ಕೆ.ಇ.ಆರ್.ಸಿ ನಿರ್ದೇಶನದ ಅನ್ವಯ, ಸ್ಮಾರ್ಟ್ ಮೀಟರ್‌ಗಳನ್ನು ವಿದ್ಯುತ್ ಸರಬರಾಜು ಕಂಪನಿಗಳ ಅಧಿಕೃತ ರೀಟೆಲ್ ಮಳಿಗೆಗಳಿಂದ ಗ್ರಾಹಕರೇ ಅವರ ಸ್ವಂತ ವೆಚ್ಚದಲ್ಲಿ ಖರೀದಿಸಬೇಕಿರುತ್ತದೆ.<br><br>AMI Software ನಿರ್ವಹಣೆಗಾಗಿ ತಗಲುವ ವೆಚ್ಚವನ್ನು (AMISP) ಪ್ರತಿ ಸ್ಮಾರ್ಟ್ ಮೀಟರ್ ಗೆ (PMPM-Per Meter Per Month) ವಿದ್ಯುತ್ ಸರಬರಾಜು ಕಂಪನಿಗಳಿಂದ ಪಾವತಿಸಲಾಗುತ್ತದೆ.<br>ಸ್ಮಾರ್ಟ್ ಮೀಟರ್ ಅಳವಡಿಕೆಗೆ ನೀಡಿರುವ ಗುತ್ತಿಗೆ ಆದೇಶದ ಅನ್ವಯ AMISP ಗೆ ನಿಗಧಿಪಡಿಸಿರುವ ದರಗಳು ಈ ಕೆಳಕಂಡಂತಿವೆ. |

| ಕ್ರ. ಸಂ | ವಿವರ | ಸಾಫ್ಟವೇರ್ ನಿರ್ವಹಣಾ ದರ (120 ತಿಂಗಳುಗಳ ಕಾಲ) ರೂ. ಗಳಲ್ಲಿ Per Meter Per Month (PMPM) |
|---|---|---|
| 1. | 1 ಫೇಸ್ ಸ್ಮಾರ್ಟ್ ಮೀಟರ್ | 75.00 |
| 2 | 3 ಫೇಸ್ ಸ್ಮಾರ್ಟ್ ಮೀಟರ್ | 118.00 |
| 3 | 3 ಫೇಸ್ ಸಿ.ಟಿ ಚಾಲಿತ ಸ್ಮಾರ್ಟ್ ಮೀಟರ್ | 118.00 |

ಸಂಖ್ಯೆ: ಎನರ್ಜಿ 161 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು